# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 232
ಸದಸ್ಯರ ಹೆಸರು : ಶ್ರೀ ಕೆ. ಎಸ್. ನವೀನ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 06-12-2023

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಸರ್ಕಾರಿ ಬಸ್‌ಗಳ ಮೂಲಕ ಸ್ತ್ರೀ ಶಕ್ತಿ ಯೋಜನೆಯನ್ನು ಜಾರಿಗೆ ತಂದ ನಂತರ ಸರ್ಕಾರಿ ರಸ್ತೆ ಸಾರಿಗೆ ನಿಗಮದ ಸಂಗ್ರಹ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ವೆಚ್ಚವಾಗಿರುವ ಮೊತ್ತ ಎಷ್ಟು;</td><td>ರಾಜ್ಯದಲ್ಲಿ ಸರ್ಕಾರಿ ಬಸ್‌ಗಳ ಮೂಲಕ ಶಕ್ತಿ ಯೋಜನೆಯನ್ನು ಜಾರಿಗೆ ತಂದ ನಂತರ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಗಳಿಸಿದ ಪ್ರತಿದಿನದ ಸರಾಸರಿ ಆದಾಯದ ವಿವರಗಳು ಈ ಕೆಳಕಂಡಂತಿದೆ:<br><br>(ರೂ.ಕೋಟಿಗಳಲ್ಲಿ)
<table>
<tr><th rowspan="2">ನಿಗಮ</th><th colspan="2">ಪ್ರತಿದಿನದ ಸರಾಸರಿ ಆದಾಯ</th></tr>
<tr><th>2022-23</th><th>ಶಕ್ತಿ ಯೋಜನೆ ಜಾರಿಯಾದ ನಂತರ 2023-24</th></tr>
<tr><td>ಕ.ರಾ.ರ.ಸಾ.ನಿಗಮ</td><td>9.21</td><td>12.57</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>4.44</td><td>5.39</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>4.73</td><td>6.60</td></tr>
<tr><td>ಕ.ಕ.ರ.ಸಾ.ನಿಗಮ</td><td>4.36</td><td>5.92</td></tr>
</table></td></tr>
<tr><td>ಆ.</td><td>ಸರ್ಕಾರ ಈ ರಸ್ತೆ ಸಾರಿಗೆ ಸಂಸ್ಥೆಗಳಿಗೆ ವಾರ್ಷಿಕವಾಗಿ ನೀಡುತ್ತಿರುವ ಅನುದಾನವೆಷ್ಟು; ಸರ್ಕಾರ ಗ್ರಾಮೀಣ ಭಾಗದಲ್ಲಿ ಎಷ್ಟು ವಾಹನಗಳನ್ನು ಮೀಸಲಾಗಿ ಇಟ್ಟಿದೆ ಹಾಗೂ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಡೀಸೆಲ್, ಸಂಬಳ ಮತ್ತು ಇತ್ಯಾದಿಗಳಿಗೆ ಬಾಕಿ ತುಂಬಬೇಕಾದ ಮೊತ್ತ ಎಷ್ಟು ?</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಸಾರಿಗೆ ನಿಗಮಗಳಿಗೆ ಒದಗಿಸಿರುವ ಅನುದಾನದ ವಿವರಗಳು ಈ ಕೆಳಕಂಡಂತಿವೆ:<br><br>(ರೂ.ಕೋಟಿಗಳಲ್ಲಿ)
<table>
<tr><th>ನಿಗಮ</th><th>2020-21</th><th>2021-22</th><th>2022-23</th><th>2023-24 ಆಯವ್ಯಯ ಹಂಚಿಕೆ</th></tr>
<tr><td>ಕ.ರಾ.ರ.ಸಾ.ನಿ</td><td>563.55</td><td>676.14</td><td>1037.37</td><td>388.65</td></tr>
<tr><td>ಬೆಂ.ಮ.ನ.ಸಾ.</td><td>1069.20</td><td>1254.44</td><td>1482.83</td><td>880.48</td></tr>
<tr><td>ವಾ.ಕ.ರ.ಸಾ.ಸಂ.</td><td>369.41</td><td>335.33</td><td>1047.63</td><td>329.56</td></tr>
<tr><td>ಕ.ಕ.ರ.ಸಾ.ನಿ.</td><td>331.20</td><td>288.99</td><td>492.55</td><td>237.82</td></tr>
<tr><td>ನಾಲ್ಕು ಸಾರಿಗೆ ಸಂಸ್ಥೆಗಳು</td><td>-</td><td>-</td><td>-</td><td>2800.00*</td></tr>
</table>
*2023-24ನೇ ಸಾಲಿನ ಆಯವ್ಯಯದಲ್ಲಿ ಶಕ್ತಿ ಯೋಜನೆಯಡಿ ರೂ.2800.00 ಕೋಟಿಗಳ ಅನುದಾನವನ್ನು ಒದಗಿಸಿದ್ದು, ನಿಗಮವಾರು ಹಂಚಿಕೆ ಮಾಡಿರುವುದಿಲ್ಲ. ನಿಗಮಗಳ ವಾಸ್ತವಿಕ ವೆಚ್ಚವನ್ನಾಧರಿಸಿ ಅನುಪಾತದನ್ವಯ ಪ್ರತಿ ಮಾಹೆ</td></tr>
</table>

ಬಿಡುಗಡೆಗೊಳಿಸಲಾಗುತ್ತಿದೆ.

**ಕ.ರಾ.ರ.ಸಾ.ನಿಗಮ:**

ಒಟ್ಟು 7574 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಅದರಲ್ಲಿ ಗ್ರಾಮೀಣ ಭಾಗದಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವ ಸಾಮಾನ್ಯ 2737 ಅನುಸೂಚಿ (ಶೇ.36.14) ಮತ್ತು ವೇಗದೂತ 2999 ಅನುಸೂಚಿ (ಶೇ.39.60) ಸೇರಿ ಒಟ್ಟಾರೆ 5736 ಅನುಸೂಚಿಗಳನ್ನು (ಶೇ.78.73) ಕಾರ್ಯಾಚರಣೆ ಮಾಡಲಾಗುತ್ತಿದೆ.

ನಿಗಮದಲ್ಲಿ ಡೀಸೆಲ್, ಸಂಬಳ ಮತ್ತು ಇತ್ಯಾದಿಗಳಿಗೆ ಅಕ್ಟೋಬರ್-2023ರ ಅಂತ್ಯಕ್ಕೆ ಬಾಕಿ ತುಂಬಬೇಕಾದ ಮೊತ್ತ ಈ ಕೆಳಗಿನಂತಿವೆ:

(ರೂ. ಕೋಟಿಗಳಲ್ಲಿ)

| ವಿವರ | ಬಾಕಿ ಹೊಣೆಗಾರಿಕೆ |
|---|---|
| ಭವಿಷ್ಯ ನಿಧಿ ಬಾಕಿ | 807.99 |
| ನಿವೃತ್ತಿ ನೌಕರರ ಬಾಕಿ | 85.55 |
| ಸಿಬ್ಬಂದಿಗಳ ಬಾಕಿ ಪಾವತಿ | 83.01 |
| ಸರಬರಾಜುದಾರರ ಬಿಲ್ ಪಾವತಿ | 24.40 |
| ಡೀಸೆಲ್ ಬಿಲ್ ಪಾವತಿ | 164.57 |
| ಎಂವಿಸಿ ಕ್ಲೈಮ್ಸ್ | 48.60 |
| ಇತರೆ ಬಿಲ್ಲುಗಳು | 51.49 |
| **ಒಟ್ಟು** | **1265.61** |

**ಬೆಂ.ಮ.ಸಾ.ಸಂಸ್ಥೆ:**

ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25.0 ಕಿ.ಮೀ.ವರೆಗೆ ಕಾರ್ಯಾಚರಣೆ ವ್ಯಾಪ್ತಿಯನ್ನು ಹೊಂದಿದ್ದು, ಸಂಸ್ಥೆಯ ಆಚರಣಾ ವ್ಯಾಪ್ತಿಗೆ ಒಳಪಡುವ ನಗರ ಹಾಗೂ ಹೊರವಲಯ ಪ್ರದೇಶಗಳ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ, ಪ್ರತಿದಿನ 5598 (ದಿನಾಂಕ:31-10-2023ರಂತೆ) ಅನುಸೂಚಿ/ಬಸ್ಸುಗಳಿಂದ 57,558 ಸುತ್ತುವಳಿಗಳನ್ನು, 11.37 ಲಕ್ಷ ಕಿ.ಮೀ.ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಸಂಸ್ಥೆಯು ಈಗಾಗಲೇ ತನ್ನ ಕಾರ್ಯಾಚರಣೆ

ವ್ಯಾಪ್ತಿಗೆ ಒಳಪಡುವ ಹಾಗೂ ಬಸ್ಸುಗಳ ಸಂಚಾರಕ್ಕೆ ಸೂಕ್ತ ರಸ್ತೆಗಳಿರುವ ಎಲ್ಲಾ ಪ್ರದೇಶಗಳಿಗೂ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

ಸಾರ್ವಜನಿಕ ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ, ಮೂಲಭೂತ ಸೌಕರ್ಯಗಳ ಲಭ್ಯತೆಗನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು ಮತ್ತು ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಸಂಸ್ಥೆಯು ಅಕ್ಟೋಬರ್-2023ರ ಅಂತ್ಯಕ್ಕೆ ರೂ.1106.76 ಕೋಟಿಗಳ ಬಾಕಿ ಹೊಣೆಗಾರಿಕೆಯನ್ನು ಉಳಿಸಿಕೊಂಡಿದ್ದು, ವಿವರ ಈ ಕೆಳಕಂಡಂತಿದೆ.

| ವಿವರ | ಮೊತ್ತ (ರೂ.ಕೋಟಿ ಗಳಲ್ಲಿ) |
|---|---|
| ಡೀಸೆಲ್ | 101.34 |
| ಹಾಲಿ/ನಿವೃತ್ತ ನೌಕರರ ಬಾಕಿ | 210.06 |
| ಇತ್ಯಾದಿ | 896.70 |
| **ಒಟ್ಟು** | **1106.76** |

**ವಾ.ಕ.ರ.ಸಾ.ಸಂಸ್ಥೆ :**

- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ 2751 ಅನುಸೂಚಿಗಳಿಂದ 23302 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
- ಸಂಸ್ಥೆಯಲ್ಲಿ ದಿನಾಂಕ:22-11-2023ರಂದು ಇದ್ದಂತೆ ಡೀಸೆಲ್, ಸಂಬಳ ಮತ್ತು ಇತರೆ ಬಾಕಿ ಪಾವತಿ ವಿವರ ಈ ಕೆಳಕಂಡಂತಿದೆ:

**(ರೂ ಕೋಟಿಗಳಲ್ಲಿ)**

| ವಿವರಣೆ | ಬಾಕಿ ಮೊತ್ತ |
|---|---|
| ಸಿಬ್ಬಂದಿ ವೇತನ | ---- |
| ಡೀಸೆಲ್ | 103.53 |
| ನಿವೃತ್ತಿ ನೌಕರರ ಬಾಕಿ | 99.62 |
| ಹಾಲಿ ನೌಕರರ ಬಾಕಿ | 148.08 |
| ಭವಿಷ್ಯ ನಿಧಿ ಬಾಕಿ | 766.88 |
| ಇತರೆ ಬಾಕಿ | 303.70 |
| **ಒಟ್ಟು** | **1421.81** |

**ಕ.ಕ.ರ.ಸಾ.ನಿಗಮ:** ನಿಗಮದ ವ್ಯಾಪ್ತಿಯಲ್ಲಿ ಒಟ್ಟು 4349 ಅನುಸೂಚಿಗಳು ಕಾರ್ಯಾಚರಣೆ ಮಾಡಲಾಗುತ್ತಿದೆ. ಅದರಲ್ಲಿ ಗ್ರಾಮೀಣ ಭಾಗದಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸುವ ಸಾಮಾನ್ಯ 1799 (ಶೇ. 41.37 ಗಳಲ್ಲಿ) ಹಾಗೂ ವೇಗದೂತ 1956 (ಶೇ. 44.98 ಗಳಲ್ಲಿ) ಒಟ್ಟಾರೆ 3755 (ಶೇ. 86.34

ಗಳಲ್ಲಿ) ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಕ.ಕ.ರ.ಸಾ.ನಿಗಮದಲ್ಲಿ ಬಾಕಿ ಪಾವತಿ ವಿವರ ಈ ಕೆಳಕಂಡಂತಿದೆ.

**(ರೂ.ಕೋಟಿಗಳಲ್ಲಿ)**

| **ವಿವರ** | **ಬಾಕಿ ಹೊಣೆಗಾರಿಕೆ** |
|---|---|
| ಭವಿಷ್ಯ ನಿಧಿ ನ್ಯಾಸ ಮಂಡಳಿ | 99.70 |
| ನಿವೃತ್ತ ನೌಕರರ ಬಾಕಿ | 84.16 |
| ನಿಬ್ಬಂದಿಗಳ ಬಾಕಿ ಪಾವತಿ | 39.22 |
| ಸರಬರಾಜುದಾರರ ಬಿಲ್ಲ್ ಪಾವತಿ | 14.80 |
| ಇಂಧನ ಬಾಕಿ ಪಾವತಿ | 85.00 |
| ಎಂವಿಸಿ ಕ್ಲೈಮ್ಸ್ | 28.32 |
| ಇತರೆ ಬಿಲ್ಲುಗಳು | 5.00 |
| **ಒಟ್ಟು** | **356.20** |

ಸಂಖ್ಯೆ: ಟಿಡಿ 175 ಟಿಸಿಕ್ಯೂ 2023

(ರಾಮಲಿಂಗಾ ರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು